## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 91(04)
ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.08.2025
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ವಿವರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಎಷ್ಟು ಸರ್ಕಾರಿ ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿವೆ: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ: **4871** ಜಿಲ್ಲಾವಾರು ಮಾಹಿತಿ **ಅನುಬಂಧ-1ರಲ್ಲಿರಿಸಿದೆ** |
| ಆ) | ರಾಜ್ಯದಲ್ಲಿ ಪ್ರಸ್ತುತ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಪ್ರಸ್ತುತ ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರ ಸಂಖ್ಯೆ : **2006.** |
| ಇ) | ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಿಕ್ಷಕರನ್ನು 240ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವರ್ಗಾಯಿಸುವ ನಿರ್ಧಾರ ಕೈಗೊಂಡಿರುವುದರಿಂದ ಗ್ರಾಮೀಣ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕಿದೆಯೇ: | ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 70 ವಿದ್ಯಾರ್ಥಿಗಳಿಗೆ ಒಂದು ವಿಭಾಗವನ್ನು ಪರಿಗಣಿಸಿ 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳು ಇರುವ ಪ್ರೌಢಶಾಲೆಗಳಿಗೆ ವಿಶೇಷ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿ ನಿಗಧಿಪಡಿಸಿದ ಹಾಗೂ ಮಂಜೂರಾತಿ ಹುದ್ದೆಗಳು ಇಲ್ಲದೇ ಹೆಚ್ಚುವರಿಯಾದ ವಿಶೇಷ ಶಿಕ್ಷಕರನ್ನು ಅದೇ ಜಿಲ್ಲೆಯಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ಇರುವ ಶಾಲೆಯಿಂದ ಪ್ರಾರಂಭಿಸಿ ಇಳಿಕೆ ಕ್ರಮದಲ್ಲಿ ಹುದ್ದೆಗಳನ್ನು ಮಂಜೂರು ಮಾಡಿ ಮರು ಹೊಂದಾಣಿಕೆ ಮಾಡಲಾಗುವುದು. |
| ಈ) | ಚಿತ್ರಕಲೆ, ಸಂಗೀತ, ನಾಟಕ, ನೃತ್ಯದಂತಹ ಸೃಜನಶೀಲ ವಿಷಯಗಳನ್ನು ಕಲಿಸುವ ವಿಶೇಷ ಶಿಕ್ಷಕರನ್ನು 240ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವರ್ಗಾಯಿಸುವ ಸರ್ಕಾರದ ನಿರ್ಧಾರದಿಂದ ಸದರಿ ಶಿಕ್ಷಕರು ಕಡಿಮೆ ಮಕ್ಕಳು ಇರುವ ಗ್ರಾಮೀಣ ಭಾಗದ ಶಾಲೆಗಳಿಂದ ಹೆಚ್ಚು ಮಕ್ಕಳಿರುವ ನಗರ ಭಾಗದ ಶಾಲೆಗಳಿಗೆ ವರ್ಗಾವಣೆಗೊಳ್ಳಲಿದ್ದು, ಇದರಿಂದ ಸರ್ಕಾರವೇ ಗ್ರಾಮೀಣ | ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿಶೇಷ ಶಿಕ್ಷಕರ ಹುದ್ದೆಗಳನ್ನು ಮೇಲಿನಂತೆ ಮರುಹೊಂದಾಣಿಕೆ ಮಾಡಿದ ನಂತರವೂ ಮಂಜೂರಾದ 2327 ಹುದ್ದೆಗಳಲ್ಲಿ ಗ್ರಾಮೀಣ ಪ್ರದೇಶಕ್ಕೆ 1699 ಹುದ್ದೆಗಳು ಮಂಜೂರಾಗಿದ್ದು, ನಗರ ಪ್ರದೇಶಕ್ಕೆ 628 ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಯುಕ್ತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಕಲಿಕೆಗೆ ಒತ್ತು ನೀಡಿದಂತಾಗುತ್ತದೆ. |

| | | |
|---|---|---|
| | ಮಕ್ಕಳಿಗೆ ಕಲೆ ಅಗತ್ಯವಿಲ್ಲ ಎಂಬ ಭಾವನೆ ಮೂಡಿಸಿದಂತಾಗುವುದಿಲ್ಲವೇ; | |
| ಉ) | ಮೂಲ ಸೌಕರ್ಯದ ಕೊರತೆಯಿಂದ ವಿದ್ಯಾರ್ಥಿಗಳ ದಾಖಲಾತಿಯೂ ಕಡಿಮೆಯಾಗಿ ವರ್ಷದಿಂದ ವರ್ಷಕ್ಕೆ ದುರ್ಬಲಗೊಳ್ಳುತ್ತಿರುವ ಗ್ರಾಮೀಣ ಭಾಗದ ಶಾಲೆಗಳನ್ನು ಉಳಿಸಿ, ಬಲಪಡಿಸುವ ನಿಟ್ಟಿನಲ್ಲಿ ಈ ನಿರ್ಧಾರವನ್ನು ರದ್ದುಪಡಿಸುವುದರ ಜೊತೆಗೆ ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲೂ ಕಲಾ ಪ್ರಕಾರಗಳ ಶಿಕ್ಷಕರು ಕಡ್ಡಾಯವಾಗಿ ಇರುವಂತೆ ಮಾಡಿ ಪಠ್ಯೇತರ ಚಟುವಟಿಕೆಗಳ ಮಹತ್ವವನ್ನು ಸಾರಲು ಸರ್ಕಾರ ಕೂಡಲೇ ಅಗತ್ಯ ಕ್ರಮವಹಿಸುವುದೇ? | ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ 70 ವಿದ್ಯಾರ್ಥಿಗಳಿಗೆ ಒಂದು ವಿಭಾಗವನ್ನು ಪರಿಗಣಿಸಿ 6 ಅಥವಾ 6 ಕ್ಕಿಂತ ಹೆಚ್ಚು ವಿಭಾಗಗಳು ಇರುವ ಪ್ರೌಢಶಾಲೆಗಳಿಗೆ ವಿಶೇಷ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿ ನಿಗಧಿಪಡಿಸಿದ ಹಾಗೂ ಮಂಜೂರಾತಿ ಹುದ್ದೆಗಳು ಇಲ್ಲದೇ ಹೆಚ್ಚುವರಿಯಾದ ವಿಶೇಷ ಶಿಕ್ಷಕರನ್ನು ಅದೇ ಜಿಲ್ಲೆಯಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆ ಇರುವ ಶಾಲೆಯಿಂದ ಪ್ರಾರಂಭಿಸಿ ಇಳಿಕೆ ಕ್ರಮದಲ್ಲಿ ಹುದ್ದೆಗಳನ್ನು ಮಂಜೂರು ಮಾಡಿ ಮರು ಹೊಂದಾಣಿಕೆ ಮಾಡಲಾಗುತ್ತಿರುವುದರಿಂದ ಗ್ರಾಮೀಣ ಭಾಗದ ಶಾಲೆಗಳಲ್ಲಿ ವಿಶೇಷ ಶಿಕ್ಷಕರ ಮಂಜೂರಾತಿ ಹುದ್ದೆ ಕಡಿಮೆಯಾಗಿರುವುದಿಲ್ಲ.. |

ಸಂಖ್ಯೆ: ಇಪಿ 124 ಎಲ್ ಬಿ ಪಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ವಿಧಾನ ಪರಿಷತ್ತಿನ ಮಾ. ಸದಸ್ಯರ ಪ್ರ.ಸಂ: 9106, ಕ್ಕೆ ಅನುಬಂಧ

| ರಾಜ್ಯದ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆಯ ಜಿಲ್ಲಾವಾರು ಪಟ್ಟಿ | | |
|---|---|---|
| ಕ್ರ ಸಂ | ಜಿಲ್ಲೆಯ ಹೆಸರು | ಶಾಲೆಗಳ ಸಂಖ್ಯೆ |
| 1 | BAGALKOT | 190 |
| 2 | BALLARI | 125 |
| 3 | BELAGAVI | 137 |
| 4 | BELAGAVI CHIKKODI | 194 |
| 5 | BENGALURU RURAL | 64 |
| 6 | BENGALURU U NORTH | 60 |
| 7 | BENGALURU U SOUTH | 91 |
| 8 | BIDAR | 167 |
| 9 | CHAMARAJANAGARA | 86 |
| 10 | CHIKKABALLAPURA | 111 |
| 11 | CHIKKAMANGALURU | 116 |
| 12 | CHITRADURGA | 115 |
| 13 | DAKSHINA KANNADA | 170 |
| 14 | DAVANAGERE | 135 |
| 15 | DHARWAD | 112 |
| 16 | GADAG | 115 |
| 17 | HASSAN | 241 |
| 18 | HAVERI | 155 |
| 19 | KALBURGI | 298 |
| 20 | KODAGU | 47 |
| 21 | KOLAR | 124 |
| 22 | KOPPAL | 185 |
| 23 | MANDYA | 215 |
| 24 | MYSURU | 233 |
| 25 | RAICHUR | 230 |
| 26 | RAMANAGARA | 107 |
| 27 | SHIVAMOGGA | 164 |
| 28 | TUMAKURU | 131 |
| 29 | TUMAKURU MADHUGIRI | 95 |
| 30 | UDUPI | 105 |
| 31 | UTTARA KANNADA | 49 |
| 32 | UTTARA KANNADA SIRSI | 76 |
| 33 | VIJAYANAGARA | 123 |
| 34 | VIJAYAPURA | 161 |
| 35 | YADAGIRI | 144 |
| **Grand Total** | | **4871** |

ನಿರ್ದೇಶಕರು (ಪ್ರೌಢ ಶಿಕ್ಷಣ)